# ಕಣ್ಮನ ಸೆಳೆವ ಜರ್ಬೆರಾ

■ ಗೀತಸದಾ, ಮೋಂತಿಮಾರು



ಪ್ರಮುಖ ವಾಣಿಜ್ಯ ಪುಷ್ಪಗಳಲ್ಲಿ ಒಂದಾದ ಜರ್ಬೆರಾ ಆಕರ್ಷಕ ಬಣ್ಣ ಹಾಗೂ ದೀರ್ಘ ಬಾಳಿಕೆಯಿಂದಾಗಿ ಇಂದು ಬೇಡಿಕೆ ಹೆಚ್ಚಿಸಿಕೊಂಡಿದೆ. ಮದುವೆ ಆರತಕ್ಷತೆ, ಗೃಹಪ್ರವೇಶ ಮತ್ತಿತರ ಸಭೆ, ಸಮಾರಂಭಗಳಲ್ಲಿ ವೇದಿಕೆಯ ಅಲಂಕಾರಕ್ಕೆ, ಹೂಮಾಲೆಗಳ ತಯಾರಿಕೆಗೆ, ಹೂದಾನಿಗಳಲ್ಲಿ ಜೋಡಿಸಲು, ಹೂಗುಚ್ಛ ತಯಾರಿಸಲು ಈ ಹೂವು ಪ್ರಮುಖವಾಗಿ ಬಳಕೆಯಾಗುತ್ತಿದೆ.

ಕಾಶ್ಮೀರದಿಂದ ನೇಪಾಳದವರೆಗೆ ಹರಡಿಕೊಂಡಿರುವ ಈ ಹೂಗಳು ಶೀತವಲಯದ ಗುಡ್ಡಪ್ರದೇಶದಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಸುಮಾರು 30ರಿಂದ 40 ಸೆಂ.ಮೀ ಎತ್ತರ ಬೆಳೆಯುವ ಈ ಸಸ್ಯವನ್ನು ಕುಂಡಗಳಲ್ಲಿ, ಉದ್ಯಾನವನದ ಹೊರ ಅಂಚುಗಳಲ್ಲಿ, ಪಾತಿಗಳಲ್ಲಿ ಮತ್ತು ಶಿಲಾ ಉದ್ಯಾನಗಳಲ್ಲಿಯೂ (ಹೆಚ್ಚು ಬಿಸಿಲು ಬೀಳದ ಸ್ಥಳಗಳಲ್ಲಿ) ಬೆಳೆಸಬಹುದು.

ಜರ್ಬೆರಾದ ತವರು ಆಫ್ರಿಕಾ. ಇದಕ್ಕೆ ಆಫ್ರಿಕನ್‌ಡೈಸಿ ಎಂಬ ಹೆಸರೂ ಇದೆ. ಇದರ ವೈಜ್ಞಾನಿಕ ಹೆಸರು ಜರ್ಬೆರಾ ಜೆಮಸೋನಿ.

ಕಡು ಹಸಿರುಬಣ್ಣದ ಒರಟಾದ ಇದರ ಎಲೆಗಳು ಗಿಡದ ಬುಡಕ್ಕಷ್ಟೆ ಸೀಮಿತವಾಗಿದ್ದು ಕಾಂಡವು ನೇರವಾಗಿ ಟೊಳ್ಳಾಗಿ ಹಾಗೂ ಎಲೆರಹಿತವಾಗಿ ಹೂವಿನೊಂದಿಗೆ ಅಂತ್ಯಗೊಳ್ಳುತ್ತದೆ. ಸುಮಾರು ನಲ್ವತ್ತಕ್ಕೂ ಹೆಚ್ಚು ವೈವಿಧ್ಯತೆಗಳಲ್ಲಿ ಹಳದಿ, ಕಿತ್ತಳೆ, ಕೆಂಪು, ಕಂದು, ಫ್ಲೆಮಿಂಗೋ, ಬಿಳಿ, ಮತ್ತಿತರ ಬಣ್ಣಗಳಲ್ಲಿ ಅರಳುತ್ತದೆ. ಇದರಲ್ಲಿ ಒಂದು ಸುತ್ತಿನ ದಳಗಳುಳ್ಳ ತಳಿಗಳು ಲಭ್ಯವಿದ್ದರೂ, ಎರಡು ಸುತ್ತಿನ ದಳದ ಹೂವುಗಳು ಇನ್ನೂ ಆಕರ್ಷಕ. ಅದಕ್ಕೇ ಬೇಡಿಕೆ ಹೆಚ್ಚು.

ಬೆಳೆಸುವ ವಿಧಾನ: ಫಲವತ್ತಾದ ಚೆನ್ನಾಗಿ ನೀರು ಬಸಿದು ಹೋಗುವ ಭೂಮಿ ಈ ಬೆಳೆಗೆ ಸೂಕ್ತ. ಬೇಸಿಗೆಯಲ್ಲಿ ಬಿಸಿಲಿನ ತಾಪಕ್ಕೆ ತುತ್ತಾಗದಂತೆ ನೆರಳು ಒದಗಿಸಬೇಕು. ತಾಯಿಗಿಡದಿಂದ ಕಂದುಗಳನ್ನು ಬೇರ್ಪಡಿಸಿ ಅಥವಾ ಅಂಗಾಂಶ ಕೃಷಿಯಿಂದ ಪಡೆದ ಸಸಿಯಿಂದಲೂ ಸಸ್ಯಾಭಿವೃದ್ಧಿ ಮಾಡಬಹುದು. ಈ ಸಸ್ಯದ ನಾಟಿಗೆ ಜೂನ್ – ಜುಲೈ ತಿಂಗಳು ಸೂಕ್ತ.

ಚೆನ್ನಾಗಿ ಅಗೆದು ಉಳುಮೆ ಮಾಡಿದ ಭೂಮಿಯಲ್ಲಿ 1.5 ಮೀ. ಅಗಲ ಹಾಗೂ ಉದ್ದ ಮತ್ತು 10 ರಿಂದ 30 ಸೆ.ಮೀ. ಎತ್ತರದ ಮಡಿಗಳನ್ನು ಮಾಡಬೇಕು. ಭೂಮಿಯಲ್ಲಿ ನೀರು ಚೆನ್ನಾಗಿ ಬಸಿದು ಹೋಗುವಂತೆ ಮಾಡಿ, ಪ್ರತೀ ಚದರ ಮೀಟರ್‌ಗೆ ಎರಡರಿಂದ ಐದು ಬುಟ್ಟಿ ಕೊಟ್ಟಿಗೆ ಗೊಬ್ಬರ, ಮರಳು ಮತ್ತು ತೆಂಗಿನನಾರನ್ನು ಸಮಪ್ರಮಾಣದಲ್ಲಿ ಮಿಶ್ರ ಮಾಡಿ ಬೆರೆಸಬೇಕು. ಹೀಗೆ ಮಡಿ ಸಿದ್ಧವಾದ ಮೇಲೆ ಸಸಿಗಳನ್ನು ಸಾಲಿನಿಂದ ಸಾಲಿಗೆ ಮತ್ತು ಸಸಿಯಿಂದ ಸಸಿಗೆ ಸುಮಾರು ಮೂವತ್ತು ಸೆಂ. ಮೀ. ಅಂತರದಲ್ಲಿ ಮಣ್ಣಿನಲ್ಲಿ ಸ್ವಲ್ಪ ಮುಚ್ಚಿದಂತೆ ನಾಟಿ ಮಾಡಬೇಕು. ನಂತರ ಕ್ರಮಬದ್ಧವಾಗಿ ಗೊಬ್ಬರ ಕೊಡುತ್ತಾ ಬರಬೇಕು. ಈ ಸಸ್ಯಗಳಿಗೆ ಮಣ್ಣು ಹಾಗೂ ಹವಾಮಾನಕ್ಕೆ ಅನುಗುಣವಾಗಿ 4– 5 ದಿನಗಳಿಗೊಮ್ಮೆ ನೀರು ಹಾಯಿಸಬೇಕು– ಎನ್ನುತ್ತಾರೆ ಪುತ್ತೂರಿನ ಆಕಾಶ್ ನರ್ಸರಿಯ ಜಗದೀಶ್ ರಾವ್.



ಜರ್ಬೆರಾ ಸಸ್ಯವೂ ರೋಗ, ಕೀಟಗಳ ಬಾಧೆಯಿಂದ ಮುಕ್ತವಾಗಿಲ್ಲ. ಬೇರುಕೊಳೆ, ಎಲೆಚುಕ್ಕೆ ರೋಗ ಸಾಮಾನ್ಯವಾಗಿ ಕಂಡುಬರುತ್ತದೆ. ಬಯಲುನಾಡಲ್ಲಿ ಇದು ಬೆಳೆಯುವುದಿಲ್ಲ. ತಂಪು ಹವೆಯಲ್ಲಿ ಸ್ವಾಭಾವಿಕವಾಗಿ ಗಾಳಿಯಾಡುವ ಹದಬಿಸಿಲು ಮತ್ತು ನೆರಳು ಬೀಳುವ ಮಾಡಿನ ಅಡಿಯಲ್ಲಿ ಚೆನ್ನಾಗಿ ಬೆಳೆಯುತ್ತದೆ. ವಾಣಿಜ್ಯ ಬೆಳೆಗಾರರು ಜರ್ಬೆರಾ ಹೂ ಬೆಳೆಯಲು ವೆಂಟಿಲೇಟೆಡ್ ಪಾಲಿಹೌಸ್ ನಿರ್ಮಿಸುತ್ತಾರೆ. ವರ್ಷವಿಡೀ ಮಾರುಕಟ್ಟೆ ಇರುವ ಜರ್ಬೆರಾ ಹೂವುಗಳಿಗೆ ಗುಣಮಟ್ಟಕ್ಕೆ ಅನುಗುಣವಾಗಿ ಬೇಡಿಕೆ ಹಾಗೂ ದರ ಇರುತ್ತದೆ.